# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **753** |
| **ಸದಸ್ಯರ ಹೆಸರು** | : | **ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | : | **22-09-2022** |
| **ಉತ್ತರಿಸುವವರು** | : | **ಸನ್ಮಾನ್ಯ ಮುಖ್ಯಮಂತ್ರಿಯವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಹಾಸನ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಸರ್ಕಾರ ಅರಣ್ಯ ಇಲಾಖೆ ವತಿಯಿಂದ ಮಾನವ ಆನೆದಾಳಿ ಸಂಘರ್ಷ ನಿಯಂತ್ರಣ ಕಾರ್ಯಕ್ರಮದ ಯೋಜನೆಯನ್ನು ಯಾವಾಗ ಜಾರಿಗೆ ತರಲಾಯಿತು; ಜಾರಿಗೆ ತಂದಿದ್ದಲ್ಲಿ, ಈ ಯೋಜನೆಯ ಉದ್ದೇಶವೇನು; (ಸಂಪೂರ್ಣ ವಿವರ ನೀಡುವುದು) | 2019-20ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-108 ರಲ್ಲಿ "ಉಪಯೋಗಿಸಿದ ರೈಲು ಹಳಿ ತಡೆಗೋಡೆಯಿಂದ ಮಾನವ-ಆನೆ-ಸಂಘರ್ಷ" ಎಂಬ ಹೊಸ ಕಾರ್ಯಕ್ರಮ / ಯೋಜನೆಯನ್ನು ಅನುಷ್ಠಾನಗೊಳಿಸಲು ಘೋಷಿಸಲಾಗಿದೆ.<br><br>ರಾಜ್ಯದ ವಿವಿಧ ಅರಣ್ಯ ಪ್ರದೇಶಗಳಲ್ಲಿನ ಕಾಡಂಚಿನ ಗ್ರಾಮಗಳಲ್ಲಿ ಮಾನವ-ಆನೆ-ವನ್ಯಪ್ರಾಣಿ ಸಂಘರ್ಷವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಮತ್ತು ಅರಣ್ಯ/ವನ್ಯಪ್ರಾಣಿಗಳ ರಕ್ಷಣೆ ಮತ್ತು ರೈತರ ಬೆಳೆ ರಕ್ಷಣೆ ಮಾಡುವುದು ಯೋಜನೆಯ ಉದ್ದೇಶವಾಗಿದೆ. |
| (ಆ) | ಹಾಸನ ಜಿಲ್ಲೆಯಲ್ಲಿ ರೈಲು ಹಳಿಗಳನ್ನು ಬಳಸಿಕೊಂಡು ಎಷ್ಟು ಕಿಲೋ ಮೀಟರ್ ಉದ್ದದ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮಾಡಲು ಗುರಿ ಹಮ್ಮಿಕೊಳ್ಳಲಾಗಿತ್ತು ಮತ್ತು ಅದಕ್ಕಾಗಿ ಇಲ್ಲಿಯ ತನಕ ಈ ಯೋಜನೆಗೆ ಖರ್ಚು ಮಾಡಿದ ಹಣ ಎಷ್ಟು? | ಕೊಡಗಿನಿಂದ ಹಾಸನಕ್ಕೆ ಆನೆಗಳ ನುಸುಳುವಿಕೆ ತಡೆಗಟ್ಟಲು ತಜ್ಞ ಸಮಿತಿಯ ವರದಿಯಂತೆ ಒಟ್ಟು 45.00 ಕಿ.ಮೀ ರೈಲ್ವೇ ಬ್ಯಾರಿಕೇಡ್ ನಿರ್ಮಾಣಕ್ಕಾಗಿ ಗುರುತಿಸಿದ್ದು, ಈ ಪೈಕಿ 9.50 ಕಿ.ಮೀ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ರೂ. 1231.696 ಲಕ್ಷಗಳ ವೆಚ್ಚ ಭರಿಸಲಾಗಿರುತ್ತದೆ. |
| (ಇ) | ಹಾಸನ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಆನೆ ದಾಳಿಯಿಂದ ಸಾವನ್ನಪ್ಪಿರುವ ರೈತರ ಸಂಖ್ಯೆ ಎಷ್ಟು; ಈ ಕುಟುಂಬದವರಿಗೆ ಪರಿಹಾರ ನೀಡಿರುವ ಮೊತ್ತವೆಷ್ಟು; (ವಿವರವಾದ ಮಾಹಿತಿ ಒದಗಿಸುವುದು) | ಹಾಸನ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಆನೆಗಳ ಹಾವಳಿಯಿಂದಾಗಿ ಮೃತಪಟ್ಟವರ ವಿವರ ಮತ್ತು ಪಾವತಿಸಿದ ಪರಿಹಾರದ ಮೊತ್ತದ ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ. |

(ಆ) ಹಾಸನ ಜಿಲ್ಲೆಯಲ್ಲಿ ಕಾಡಂಚಿನ ಪ್ರದೇಶಗಳಲ್ಲಿ ಆನೆಗಳ ದಾಳಿ ಮತ್ತು ಹಾವಳಿ ಹೆಚ್ಚಾಗಿದ್ದು, ಕಳೆದ ಮೂರು ವರ್ಷದಲ್ಲಿ ಎಷ್ಟು ಆನೆ ನಿರೋಧಕ ಕಂದಕ ನಿರ್ಮಾಣ/ಕೃಷಿ ಭೂಮಿಯಲ್ಲಿ ಸೌರಶಕ್ತಿ (ಸೋಲಾರ್) ಬೇಲಿ ಅಳವಡಿಸಿ ಕೊಡುವುದು ಸೇರಿದಂತೆ, ಸರ್ಕಾರ ಏನೇನು ಕ್ರಮ ತೆಗೆದುಕೊಂಡು ಅಳವಡಿಲಾಗಿದೆ? (ವಿವರ ನೀಡುವುದು)

ಹಾಸನ ಜಿಲ್ಲೆಯಲ್ಲಿ ಕಾಡಂಚಿನ ಪ್ರದೇಶಗಳಲ್ಲಿ ಕಾಡಾನೆಗಳ ದಾಳಿ ಮತ್ತು ಹಾವಳಿ ಹೆಚ್ಚಾಗಿದ್ದು, ಕಳೆದ ಮೂರು ವರ್ಷಗಳಲ್ಲಿ ಆನೆ ನಿರೋಧಕ ಕಂದಕ ನಿರ್ಮಾಣ/ಟೆಂಟಕಲ್ ಬೇಲಿ ನಿರ್ಮಾಣ ಮತ್ತು ಕೃಷಿ ಭೂಮಿಯಲ್ಲಿ ಸೌರಶಕ್ತಿ (ಸೋಲಾರ್) ಬೇಲಿ ಅಳವಡಿಸಿರುವ ವಿವರ ಈ ಕೆಳಕಂಡಂತಿದೆ:-

**ಆನೆ ನಿರೋಧಕ ಕಂದಕ ನಿರ್ಮಾಣ:**

| ಕ್ರ. ಸಂ. | ವರ್ಷ | ವಲಯ | ಕಿ.ಮೀ. |
|---|---|---|---|
| 1 | 2019-20 | - | - |
| 2 | 2020-21 | - | - |
| 3 | 2021-22 | ಬೇಲೂರು | 8.55 |
| | | ಹಾಸನ | 2.00 |
| | | ಅರಕಲಗೂಡು | 2.00 |
| 4 | 2022-23 | - | - |

**ಟೆಂಟಕಲ್ ಬೇಲಿ ನಿರ್ಮಾಣ:-**

| ಕ್ರ. ಸಂ | ವರ್ಷ | ವಲಯ | ಕಿ.ಮೀ. |
|---|---|---|---|
| 1 | 2019-20 | - | - |
| 2 | 2020-21 | - | - |
| 3 | 2021-22 | ಅರಕಲಗೂಡು | 2.00 |
| | | ಯಸಳೂರು | 12.00 |
| 4 | 2022-23 | - | - |

**ಕೃಷಿ ಭೂಮಿಯಲ್ಲಿ ಸೋಲಾರ್ ತಂತಿಬೇಲಿ ನಿರ್ಮಾಣ:**

| ಕ್ರ. ಸಂ | ವರ್ಷ | ವಲಯ | ಕಿ.ಮೀ. |
|---|---|---|---|
| **1** | 2019-20 | ಯಸಳೂರು | 2.608 |
| **2** | 2020-21 | ಸಕಲೇಶಪುರ | 0.755 |
| | | ಯಸಳೂರು | 3.600 |
| **3** | 2021-22 | ಆಲೂರು | 4.00 |
| **4** | 2022-23 | ಆಲೂರು | 16.385 **(*)** |

(*):-2022-23ನೇ ಸಾಲಿಗೆ ಗುರಿ ನಿಗದಿಪಡಿಸಲಾಗಿದೆ.

**ವನ್ಯಪ್ರಾಣಿ ಹಾವಳಿ ತಡೆಗಟ್ಟಲು ಕೈಗೊಂಡಿರುವ ಇತರೆ ಕ್ರಮಗಳು:-**

1. ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಸಕಲೇಶಪುರ, ಆಲೂರು, ಯಸಳೂರು, ಅರಕಲಗೂಡು ಮತ್ತು ಬೇಲೂರು ವಲಯಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿದ್ದು, ಕಾಡಾನೆಗಳನ್ನು ನಿಯಂತ್ರಿಸಲು ತಲಾ 4 ಜನರ ತಂಡದಂತೆ 21 ಕಾಡಾನೆಗಳನ್ನು ಹಿಮ್ಮೆಟ್ಟಿಸುವ ತಂಡಗಳು, 05 ಕ್ಷಿಪ್ರ ಕಾರ್ಯಪಡೆ ತಂಡಗಳನ್ನು ರಚಿಸಿ ಕಾಡಾನೆಗಳು ಹಿಮ್ಮೆಟ್ಟಿಸುವ ಕಾರ್ಯಕೈಗೊಳ್ಳಲಾಗುತ್ತಿದೆ.

...3

| | | |
|---|---|---|
| | | 2. ಉಪದ್ರವಕಾರಿ ಪುಂಡಾನೆಗಳನ್ನು ಸೆರೆಹಿಡಿದು ಸ್ಥಳಾಂತರಿಸುವ ಕಾರ್ಯ.<br><br>3. ಪಟಾಕಿ ಖರೀದಿಸಿ ರೈತರಿಗೆ ಹಂಚಿಕೆ ಮಾಡುವುದು.<br><br>4. ಕಾಡಾನೆ ಗುಂಪಿನಲ್ಲಿರುವ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ, ಆನೆಗಳ ಚಲನ-ವಲನಗಳ ಬಗ್ಗೆ ನಿಗಾ ವಹಿಸಲಾಗುತ್ತಿದ್ದು, ಸದರಿ ಆನೆಗಳ ಚಲನ-ವಲನಗಳ ಮಾಹಿತಿಯನ್ನು ಸ್ಥಳೀಯ ಜನರಿಗೆ ಎಸ್.ಎಮ್.ಎಸ್./ ವಾಟ್ಸಪ್ ಮೂಲಕ ಮುಂಜಾಗ್ರತಾ ಕ್ರಮವಾಗಿ ತಿಳಿಸಲಾಗುತ್ತಿರುತ್ತದೆ. ಇದರಿಂದ ಸಾರ್ವಜನಿಕರು ಪೂರ್ವ ಮಾಹಿತಿ ಪಡೆದು ಎಚ್ಚರಿಕೆ ವಹಿಸಲು ಸಾಧ್ಯವಾಗುತ್ತದೆ.<br><br>5. ಅರಣ್ಯ ಪ್ರದೇಶದಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು 2019-20ನೇ ಸಾಲಿನಿಂದ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಹಂತ ಹಂತವಾಗಿ ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅವಕಾಶ ಮಾಡಲಾಗಿದೆ<br><br>6. ಕಾಡಾನೆಗಳಿಗೆ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿ ಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ..<br><br>7. ಕಾಡಾನೆಗಳು ಅರಣ್ಯ ಪ್ರದೇಶದಿಂದ ಸಾರ್ವಜನಿಕರ ವಸಾಹತುಗಳಿಗೆ ನುಗ್ಗಿ ಹಾವಳಿ ನಡೆಸುವುದನ್ನು ನಿಯಂತ್ರಿಸಲು ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ ನಿರ್ವಹಿಸಲಾಗುತ್ತಿದೆ.<br><br>8. ಕಾಡಾನೆಗಳ ಚಲನವಲನ ಕುರಿತು ಮಾಹಿತಿ ನೀಡುವ ಮುನ್ನೆಚ್ಚರಿಕೆ ವ್ಯವಸ್ಥೆ (Early Warning System) ತಂತ್ರಾಂಶವನ್ನು ರೂಪಿಸಲಾಗಿದೆ. |

| | | |
|---|---|---|
| | | 9. ಕಾಡು ಪ್ರಾಣಿಗಳ ಚಲನವಲನದ ಬಗ್ಗೆ ಸಾರ್ವಜನಿಕರಿಂದ ಮಾಹಿತಿ ಪಡೆಯಲು ಮತ್ತು ತಕ್ಷಣವೇ ಪ್ರತಿಕ್ರಿಯಿಸಲು 24/7 ಸಹಾಯವಾಣಿಯನ್ನು (1926) ಸ್ಥಾಪಿಸಲಾಗಿದೆ.<br>10. ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣದ ಬಗ್ಗೆ ರೈತರಿಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ತರಬೇತಿ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಆನೆಗಳ ಹಾವಳಿಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಕ್ರಮಕೈಗೊಳ್ಳಲಾಗಿದೆ. |

**ಸಂಖ್ಯೆ: ಅಪಜೀ 147 ಎಫ್‌ಡಬ್ಲ್ಯುಎಲ್ 2022**

**(ಬಸವರಾಜ ಬೊಮ್ಮಾಯಿ)**
ಮುಖ್ಯಮಂತ್ರಿ

**ಅನುಬಂಧ-1**

## ಹಾಸನ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಆನೆಗಳ ಹಾವಳಿಯಿಂದಾಗಿ ಮೃತಪಟ್ಟವರ ಹಾಗೂ ಮೃತರ ಸಂತ್ರಸ್ತರಿಗೆ ಪಾವತಿಸಿದ ದಯಾತ್ಮಕ ಧನದ ವಿವರ :

| | | | | |
|---|---|---|---|---|
| 1 | ಸಕಲೇಶಪುರ | 22.05.2019 | ಲತಾ ಕೋಂ ಲೇಟ್ ಶೇಖರಶೆಟ್ಟಿ, ಕ್ಯಾಮನಹಳ್ಳಿ ಗ್ರಾಮ, ಹಾನುಬಾಳು ಹೋಬಳಿ, ಸಕಲೇಶಪುರ ತಾಲ್ಲೂಕು | 5,00,000/- |
| 2 | ಬೇಲೂರು | 19.06.2019 | ಪುಷ್ಪ ಕೋಂ ಠಾಕೂರ್ ಸಿಂಗ, ದೇವರಹಳ್ಳಿ ಗ್ರಾಮ, ಮಾದಿಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು. | 5,00,000/- |
| 3 | ಹಾಸನ | 23.07.2019 | ಎಲ್.ಎನ್. ಅಣ್ಣೇಗೌಡ ಬಿನ್ ಲಿಂಗೇಗೌಡ, ಲಿಂಗನಹನಹಳ್ಳಿ ಗ್ರಾಮ, ಸಾಲಗಾಮೆ ಹೋಬಳಿ, ಹಾಸನ ತಾಲ್ಲೂಕು. | 5,00,000/- |
| 4 | ಸಕಲೇಶಪುರ | 01.09.2020 | ಹೆಚ್.ಆರ್ ಆಸ್ತಿಕ ಬಿನ್ ಲೇ॥ ಹೆಚ್.ಎಸ್ ರಾಜಪ್ಪ, ಕೊಲ್ಲಹಳ್ಳಿ ಗ್ರಾಮ ಕಸಬಾ ಹೋಬಳಿ, ಸಕಲೇಶಪುರ ತಾಲ್ಲೂಕು. | 7,50,000/- |
| 5 | ಆಲೂರು | 19.12.2020 | ಪ್ರದಾನ್ ಬಿನ್ ರಂಗೇಗೌಡ, ಕ್ಯಾನನಹಳ್ಳಿ ಕಾಲೋನಿ, ಕುಂದೂರು ಹೋಬಳಿ, ಆಲೂರು ತಾಲ್ಲೂಕು. | 7,50,000/- |
| 6 | ಬೇಲೂರು | 03.01.2021 | ಎನ್. ರಾಜನ್, ಬಿನ್ ಅಚ್ಯುತನ್, ಪೆರುಂತ್ತಬಾಲ್ ಗ್ರಾಮ, ಕಣ್ಣೂರು ಜಿಲ್ಲೆ, ಕೇರಳ ರಾಜ್ಯ | 7,50,000/- |
| 7 | ಅರಕಲಗೂಡು | 27.01.2021 | ರೇವಣ್ಣ @ ರವಿ, ಬಿನ್ ಚಿಕ್ಕೇಗೌಡ, ಚಿಕ್ಕಹೊನ್ನೇನಹಳ್ಳಿ ಗ್ರಾಮ, ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂಕು. | 7,50,000/- |
| 8 | ಸಕಲೇಶಪುರ | 11.02.2021 | ಹೆಚ್.ಎಸ್ ವಸಂತ ಬಿನ್ ಲೇ॥ ಸಿಂಕ್ರ, ಹಲಸುಲಿಗೆ ಗ್ರಾಮ, ಕಸಬಾ ಹೋಬಳಿ, ಸಕಲೇಶಪುರ ತಾಲ್ಲೂಕು | 7,50,000/- |
| 9 | ಸಕಲೇಶಪುರ | 02.04.2021 | ಎಂ.ಪಿ. ಶಿವು ಬಿನ್ ಸಿಂಗಪ್ಪ, [illegible] ಗ್ರಾಮ, ಬೆಳಗೋಡು ಹೋಬಳಿ, ಸಕಲೇಶಪುರ ತಾಲ್ಲೂಕು | [illegible] |
| 10 | [illegible] | 07.05.2021 | ಶಿವ ಬಿನ್ ಗುರುವ, ಲಿಂಗಾಪುರ ಗ್ರಾಮ, ಅರೇಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು. | 7,50,000/- |
| 11 | ಸಕಲೇಶಪುರ | 02.06.2021 | ಕೆ.ಎಸ್. ಚಿದ್ವಯ್ಯ ಬಿನ್ ಲೇಟ್ ಕೆ.ಎ. ಸುಬ್ಬಪ್ಪ, ಚನಹಳ್ಳಿ ಗ್ರಾಮ, ಸಕಲೇಶಪುರ ತಾಲ್ಲೂಕು. | 7,50,000/- |
| 12 | ಬೇಲೂರು | 11.03.2022 | ಚಿಕ್ಕಯ್ಯ, ಬಿನ್ ಮಂಜಯ್ಯ, ಕಡೆಗರ್ಜೆ ಗ್ರಾಮ, ಅರೇಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು | 7,50,000/- |
| 13 | ಬೇಲೂರು | 11.03.2022 | ಚಿಕ್ಕಯ್ಯ, ಬಿನ್ ಈರಯ್ಯ, ಕಡೆಗರ್ಜೆ ಗ್ರಾಮ, ಅರೇಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು | 7,50,000/- |
| 14 | ಸಕಲೇಶಪುರ | 10.05.2022 | ರವಿ ಬಿನ್ ರಾಜಯ್ಯ, ಕೋಗರಹಳ್ಳಿ ಗ್ರಾಮ, ಹಾನುಬಾಳು ಹೋಬಳಿ, ಸಕಲೇಶಪುರ ತಾಲ್ಲೂಕು | 7,50,000/- |
| 15 | ಸಕಲೇಶಪುರ | 02.07.2022 | ಕೆ. ಕೆ. ಕೃಷ್ಣೇಗೌಡ ಬಿನ್ ಲೇ॥ ಕಾಳೇಗೌಡ, ಕೆಸಗಳಲೆ ಗ್ರಾಮ, ಕಸಬಾ ಹೋಬಳಿ, ಸಕಲೇಶಪುರ ತಾಲ್ಲೂಕು. | 7,50,000/- |
| 16 | ಸಕಲೇಶಪುರ | 08.08.2022 | ಶ್ರೀ ಮಂಜುನಾಥ ಎಸ್.ಎಂ. ಬಿನ್ ಮಲ್ಲೇಗೌಡ, ಸುಳ್ಳಕ್ಕಿ ಗ್ರಾಮ, ಕಸಬಾ ಹೋಬಳಿ, ಸಕಲೇಶಪುರ ತಾಲ್ಲೂಕು | 7,50,000/- |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು,
ಕರ್ನಾಟಕ, ಬೆಂಗಳೂರು